**CC. NO. 1155/2024**
<u>ಪಿಡಬ್ಲ್ಯೂ1</u>

ದಿನಾಂಕಃ **06-09-2025** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎಂ ಪಿ ವಕೀಲರಿಂದಃ</u>

ನನಗೆ ಈಗ 57 ವರ್ಷ ವಯಸ್ಸಾಗಿದೆ. ನಾನು ಹಿಂದೆ ಬ್ರೆಡ್ ತಯಾರಿಸುವ ಕಾರ್ಖಾನೆ ನಡೆಸುತ್ತಿದ್ದೆನು, ಈಗ ಒಳಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಮತ್ತು ಆರೋಪಿ ನಡುವೆ ಬಹಳ ವರ್ಷಗಳಿಂದ ಪರಿಚಯ ಇದೆ ಎಂದರೆ ಸರಿ. ಆರೋಪಿ ಯಾದಗಿರಿಯಲ್ಲಿ ಬಟ್ಟೆ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. ಆರೋಪಿ ಅಂಗಡಿ ಬಹಳ ಹಳೆಯ ಬಟ್ಟೆ ಅಂಗಡಿ ಆಗಿತ್ತು ಎಂದರೆ ಸರಿ.

2. ಆರೋಪಿಗೆ ಸಾಲ ನೀಡುವ ಸಮಯದಲ್ಲಿ ನನ್ನ ಮನೆಯಲ್ಲಿ ನಾನು ಒಬ್ಬನೇ ಇದ್ದೆನು. ಆರೋಪಿಯು ಸಹ ಸಾಲ ಪಡೆದುಕೊಳ್ಳಲು ಒಬ್ಬರೇ ಬಂದಿದ್ದರು. ಅಂದರೆ ಸಾಲದ ವ್ಯವಹಾರದ ಸಮಯದಲ್ಲಿ ನನ್ನ ಮತ್ತು ಆರೋಪಿಯನ್ನು ಹೊರತು ಪಡಿಸಿ ಬೇರೆಯಾರು ಹಾಜರು ಇರಲಿಲ್ಲ ಎಂದರೆ ಸರಿ. ಆರೋಪಿಗೆ ನಗದು ರೂಪದಲ್ಲಿ ಸಾಲದ ಹಣ ನೀಡಿದ್ದೆನು. ನಮ್ಮ ಸಮುದಾಯದ ಜನ ಸೋಮನಾಥ ಹಾಗೂ ಇತರ ದೇವಸ್ಥಾನಗಳಿಗೆ ಹೋಗಿ ಬರಲು ಬೇಕಾಗುವ ಎಲ್ಲಾ ವ್ಯವಸ್ಥೆ ಮಾಡಲು ನಮ್ಮ ಸಮುದಾಯದ 15-20 ಜನರ ಒಂದು ಸಮೀತಿ ಇರುತ್ತದೆ ಎಂದರೆ ಸರಿ. ಸದರಿ ವ್ಯವಸ್ಥೆ ಮಾಡಿಸಲು ಸಮಿತಿಯ 3-4 ಜನ ಸದಸ್ಯರು ಸದರಿ ಸ್ಥಳಗಳಿಗೆ ಹೊಗಿ ಬರುತ್ತಾರೆ. ನಾನು ಹಾಗೂ ಹನುಮಾನ್ ಸೇಟ್ ರವರು ಸದರಿ ವ್ಯವಸ್ಥೆ ಮಾಡಿಸಲು ಹೋಗಿದ್ದೆವು. ಹಾಗೇ ಹೋದಾಗ ನಾವು ನಮ್ಮ ಸಮುದಾಯದ ಭವನಗಳಲ್ಲಿ ಉಳಿದುಕೊಳ್ಳುತ್ತೇವೆ ಎಂದರೆ ಸರಿ. ಹಾಗೆ ಉಳಿದುಕೊಂಡಾಗ ಸಮುದಾಯ ಭವನದವರು ನಮ್ಮಗಳ ವಿವರಗಳನ್ನು, ನಮಗೆ ನೀಡಿದ ಕೋಠಡಿ ಹಾಗೂ ನಾವು ಉಳಿದುಕೊಂಡ ಅವದಿಯ ದಿನಾಂಕಗಳನ್ನು ತಮ್ಮ ಪುಸ್ತಕದಲ್ಲಿ ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿ. ನಾವು ದಿಃ 15.01.2024 ರಂದು ಹೋಗಿ ದಿಃ 19.01.2024 ರಂದು ಮರಳಿ ಬಂದಿದ್ದೆವು. ನಾನು ಹಾಗೂ ಹನುಮಾನ್ ಸೇಟ್ ರವರು ಒಬ್ಬ ವ್ಯಕ್ತಿ ಹತ್ತಿರವೇ ನಮ್ಮ ರೈಲ್ವೇ ಟಿಕೇಟ್ ಬುಕ್ ಮಾಡಿಸಿದ್ದೆವು. ಸದರಿ ಟಿಕೇಟನ್ನು ನಾನೇ ಬುಕ್ ಮಾಡಿಸಿದ್ದೆನು. ಟಿಕೇಟು ಮಾಡಿಸುವಾಗ ನನ್ನ ಸರಿಯಾದ ಹೆಸರು ಹಾಗೂ ವಯಸ್ಸು ತಿಳಿಸಿದ್ದೆನು. ನಿಪಿ-6 ರಿಂದ 8 ರ ಟಿಕೇಟುಗಳಲ್ಲಿ ನನ್ನ ವಯಸ್ಸು

ಬೇರೆ ಬೇರೆಯಾಗಿ ನಮೂದಾಗಿದೆ ಎಂದರೆ ಸರಿ. ನಾನು ದಿನಾಂಕ 15.01.2024 ರಿಂದ 19.01.2024 ವರೆಗೆ ಯಾವುದೇ ಸ್ಥಳಕ್ಕೆ ಪ್ರಯಾಣ ಮಾಡದಿದ್ದರೂ ನಿಪಿ-6 ರಿಂದ 8 ರ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ಹಾಜರು ಮಾಡಿದ್ದೇನೆಂದರೆ ಸರಿಯಲ್ಲ.

3. ಚೆಕ್ಕಿನಲ್ಲಿ ಇರುವ ವಿವರಗಳನ್ನು ಯಾರು ಬರೆದಿದ್ದಾರೆ ಎಂದರೆ ಸಾಕ್ಷಿಯು ಆರೋಪಿ ತನಗೆ ಬರೆಯಲು ಬರದ ಕಾರಣ ನನಗೆ ಬರೆಯುವಂತೆ ತಿಳಿಸಿ ಸಹಿ ಮಾತ್ರ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿ ನನ್ನಿಂದ ರೂ.8,46,500/- ಪಡೆದುಕೊಂಡಿಲ್ಲ, ಹೊರತು 2020 ರಲ್ಲಿ ತಿಂಗಳಿಗೆ ರೂ. 2 ಪ್ರತಿಶತ ಬಡ್ಡಿಯಂತೆ ರೂ.6 ಲಕ್ಷ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. 2020 ರಲ್ಲಿ ಸದರಿ ಸಾಲ ನೀಡಿದಾಗ ನಾನು ಆರೋಪಿಯಿಂದ ಆತನ ಖಾತೆಯ 326328, 261136, 261137, 326323, 326327 ನಂರಿನ ಮತ್ತು ನಿಪಿ-1 ರ ಚೆಕ್ಕುಗಳನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ಆರೋಪಿ ನನ್ನ ಸಮಕ್ಷಮದಲ್ಲಿಯೇ ನಿಪಿ-1 ಎ ರಲ್ಲಿನ ಸಹಿಯನ್ನು ಮಾಡಿರುತ್ತಾನೆ. ಚೆಕ್ಕಿನಲ್ಲಿನ ವಿವರಗಳನ್ನು ನಾನು ಬರೆದ ನಂತರ ಆರೋಪಿ ಚೆಕ್ಕಿಗೆ ಸಹಿ ಮಾಡಿರುತ್ತಾರೆ. ನೀವು ಚೆಕ್ಕಿನಲ್ಲಿ ವಿವರಗಳನ್ನು ಬರೆಯಲು ಉಪಯೋಗಿಸಿದ್ದ ಪೆನ್ನನ್ನೆ ತೆಗೆದುಕೊಂಡು ಆರೋಪಿ ಸಹಿ ಮಾಡಿದ್ದಾರೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆರೋಪಿ ನೀಲಿ ಬಣ್ಣದ ಶಾಹಿಯ ಪೆನ್ನಿನಿಂದ ಸಹಿ ಮಾಡಿದ್ದಾರೆ. ನಾನು ಪ್ರತೀ ತಿಂಗಳು ಆರೋಪಿಯ ಅಂಗಡಿಗೆ ಹೋಗಿ ರೂ.6 ಲಕ್ಷ ಸಾಲದ ಬಡ್ಡಿ ಪಡೆದುಕೊಳ್ಳುತ್ತಿದ್ದೆನು ಎಂದರೆ ಸರಿಯಲ್ಲ.

4. ಆರೋಪಿ ತನ್ನ ಬಟ್ಟೆ ಅಂಗಡಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಮಾರಾಟದಿಂದ ಬಂದ ರೂ.7 ಲಕ್ಷ ಹಣವನ್ನು ಆರೋಪಿ ನನಗೆ ರೂ.6 ಲಕ್ಷ ಸಾಲದ ಹಾಗೂ ಬಡ್ಡಿ ಪಾವತಿಗಾಗಿ ದಿಃ 17.01.2024 ರಂದು ನೀಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ದಿಲೀಪ್ ಗುಪ್ತ ಹಾಗೂ ಶರಣಗೌಡ ಹತ್ತಿಕುಣಿ ರವರ ಸಮಕ್ಷಮ ನನಗೆ ಸದರಿ ಹಣ ಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು ಆರೋಪಿಗೆ 05 ಚೆಕ್ಕುಗಳನ್ನು ಮರಳಿ ಕೊಟ್ಟು ನಿಪಿ-1 ರ ಚೆಕ್ಕು ಮನೆಯಲ್ಲಿ ಕಳೆದು ಹೋಗಿದೆ ಎಂದು ತಿಳಿಸಿದ್ದೆನು ಎಂದರೆ ಸರಿಯಲ್ಲ. ಅಲ್ಲದೇ ನಿಪಿ-1 ರ ಚೆಕ್ಕಿಗೆ ಸಂಬಂಧಿಸಿದ ಖಾತೆಯನ್ನು ಮುಚ್ಚಿಸಿರುವುದಾಗಿ ನನಗೆ ಅದೇ ಸಮಯದಲ್ಲಿ ತಿಳಿಸಿದ್ದರು ಎಂದರೆ ಸರಿಯಲ್ಲ. ದಿಃ 04.08.2023 ರಲ್ಲಿಯೇ ಖಾತೆ ಮುಚ್ಚಿರುವುದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

5. ನಾವು ಕಲಬುರಗಿಯಿಂದ ಉಜ್ಜಯಿನಿ ಹಾಗೂ ಅಲ್ಲಿಂದ ಸೋಮನಾಥ ದೇವಾಲಯಕ್ಕೆ ಹೋಗಿ ಅಲ್ಲಿಂದ ರಾಜಕೋಟ ರೈಲು ನಿಲ್ದಾಣಕ್ಕೆ ಬಂದು ಊರಿಗೆ ಮರಳಿ ಬಂದಿರುತ್ತೇವೆ. ನಾವು ಉಜ್ಜಯಿನಿಯಲ್ಲಿ ಒಂದು ದಿನ ಹಾಗೂ ಸೋಮನಾಥದಲ್ಲಿ ಒಂದು ದಿನ ವಾಸವಿದ್ದೆವು. ನಾವು ಸದರಿ ಸ್ಥಳಗಳಲ್ಲಿ ಉಳಿದುಕೊಂಡಿರುವುದನ್ನು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಾವು ಸದರಿ ಸ್ಥಳಗಳಲ್ಲಿ ಬಸ್ಸಿನಲ್ಲಿ ಓಡಾಡಿರುವುದನ್ನು ತೋರಿಸಲು ಟಿಕೇಟ್ ಹಾಜರು ಮಾಡಿಲ್ಲ ಎಂದರೆ ಸರಿ. ನಿಮ್ಮ ಸುಮುದಾಯದಲ್ಲಿ ದಿನೇಶ್ ಎಂಬ ಹೆಸರಿನವರು ಇನ್ನೊಬ್ಬರು ಇದ್ದಾರೆ ಎಂದರೆ ಸಾಕ್ಷಿಯು ಹಲವಾರು ಜನ ಇದ್ದಾರೆ ಅದರೆ ದಿನೇಶ್ ಶರ್ಮಾ ಎಂಬ ಹೆಸನವರು ಬೇರೆಯಾರು ಇಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಿಂದ 8 ರ ಟಿಕೆಟುಗಳಲ್ಲಿ ದಿನೇಶ ಎಂದು ಮಾತ್ರ ನಮೂದು ಇದೆ ಎಂದರೆ ಸರಿ. ಆರೋಪಿ ಸಂಪೂರ್ಣ ಸಾಲ ಹಾಗೂ ಬಡ್ಡಿ ಪಾವತಿ ಮಾಡಿದ್ದರೂಾ ಸಹ ಹೆಚ್ಚಿನ ಹಣ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2020ರಲ್ಲಿ ನೀಡಿದ್ದ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡು ಸುಳ್ಳ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 17.01.2024 ರಂದು ನಾನು ಯಾದಗಿರಿಯಲ್ಲಿಯೇ ಇದ್ದೆನು, ಬೇರೆಯೆಲ್ಲೂ ಹೋಗಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ